## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಬೆಳಗಾವಿ ಜಿಲ್ಲೆಯ ಗೋಕಾಕ್ ತಾಲ್ಲೂಕಿನ ಘಟ್ಟಿ ಬಸವಣ್ಣಾ ಕುಡಿಯುವ ನೀರು ಸರಬರಾಜು ಯೋಜನೆಗೆ ನೀರು ಹಂಚಿಕೆ ಮಾಡುವ ಕುರಿತು.

*****

**ಓದಲಾಗಿದೆ:**

1. ಸರ್ಕಾರದ ಆದೇಶ ಸಂಖ್ಯೆ: ಜಸಂಇ 6 ವಿಬ್ಯಾಮ 2020, ದಿನಾಂಕ:24/11/2020 ಮತ್ತು 06.01.2021
2. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಇವರ ಪತ್ರ ಸಂಖ್ಯೆ: ಕನೀನಿನ/ನೀ(ಉ)ವ/ಘಟ್ಟಿ ಬಸವಣ್ಣಾ/13/2020/4409, ದಿನಾಂಕ: 29.11.2021
3. ಮುಖ್ಯ ಇಂಜಿನಿಯರ್, ಅಂತರ ರಾಜ್ಯ ಜಲ ವಿವಾದ, ಜಲ ಸಂಪನ್ಮೂಲ ಅಭಿವೃದ್ಧಿ ಸಂಸ್ಥೆ ಇವರ ಪತ್ರ ದಿನಾಂಕ: ಜಸಅ/ಕೆಜಿಫ/Ghatti Basavanna DWS/ಸಇಂ/11/1359/ 2020-21/ ದಿನಾಂಕ:25.01.2022

******

**ಪ್ರಸ್ತಾವನೆ:**

ಮೇಲೆ ಓದಲಾದ (1) ರ ಸರ್ಕಾರದ ಆದೇಶಗಳಲ್ಲಿ ಬೆಳಗಾವಿ ಜಿಲ್ಲೆಯ ಗೋಕಾಕ ತಾಲ್ಲೂಕಿನ ಘಟ್ಟಿ ಬಸವಣ್ಣಾ ಕುಡಿಯುವ ನೀರು ಸರಬರಾಜು ಯೋಜನೆಗೆ ಸರ್ಕಾರದ ಆಡಳಿತಾತ್ಮಕ ಅನುಮೋದನೆಯನ್ನು ನೀಡಲಾಗಿರುತ್ತದೆ.

2) ಸದರಿ ಯೋಜನೆಯಡಿ, ಗೋಕಾಕ್ ಮತ್ತು ಸುತ್ತಮುತ್ತಲಿನ 131 ಗ್ರಾಮಗಳಿಗೆ ಹಾಗೂ ಹುಕ್ಕೇರಿ, ಬೈಲಹೊಂಗಲ, ಸವದತ್ತಿ ತಾಲ್ಲೂಕಿನ ಕೆಲವು ಗ್ರಾಮಗಳಿಗೆ ಕುಡಿಯುವ ನೀರನ್ನು ಒದಗಿಸಲು ಉದ್ದೇಶಿಸಲಾಗಿದೆ. ಸದರಿ ಯೋಜನೆಯು ವಿವಿದೋದ್ದೇಶ ಯೋಜನೆಯಾಗಿದ್ದು, ಕುಡಿಯುವ ನೀರನ್ನು ಒದಗಿಸುವುದಲ್ಲದೆ ಕೆರೆ ತುಂಬಿಸಲು ಮತ್ತು ಕೈಗಾರಿಕಾ ಉದ್ದೇಶಗಳಿಗಾಗಿ ನೀರನ್ನು ಒದಗಿಸಲು ಸಹ ಉದ್ದೇಶಿಸಲಾಗಿದೆ. ಸದರಿ ಯೋಜನೆಯ ಒಟ್ಟಾರೆ ನೀರಿನ ಬಳಕೆಯ ಪ್ರಮಾಣವು 4.78 (3.38+0.5+0.30+0.60) ಟಿ.ಎಂ.ಸಿ ಆಗಿರುತ್ತದೆ.

3) ಸದರಿ ಯೋಜನೆಯಡಿ ಕುಡಿಯುವ ನೀರಿಗಾಗಿ 3.38 ಟಿಎಂಸಿ (Consumptive use @ 20% - 0.676 ಟಿಎಂಸಿ), ಕೈಗಾರಿಕಾ ಉದ್ದೇಶಕ್ಕಾಗಿ 0.5 ಟಿಎಂಸಿ (Consumptive use @ 2.5% -0.0125 ಟಿಎಂಸಿ), Evaporation lossess 0.30 ಟಿ.ಎಂ.ಸಿ ಮತ್ತು ಕೆರೆ ತುಂಬಿಸಲು 0.6 ಟಿಎಂಸಿ ನೀರನ್ನು ಬಳಸಿಕೊಳ್ಳಲು ಯೋಜಿಸಲಾಗಿದೆ. ಕೆರೆ ತುಂಬಿಸಲು ಬೇಕಾಗುವ 0.6 ಟಿ.ಎಂ.ಸಿ ನೀರಿಗೆ ಸಣ್ಣ ನೀರಾವರಿ ಹಂಚಿಕೆಯಲ್ಲಿ ಈಗಾಗಲೇ KWDT-I ಅಡಿಯಲ್ಲಿ ಒದಗಿಸಲಾಗಿದೆ. ಇನ್ನುಳಿದ, 4.18 ಟಿ.ಎಂ.ಸಿ ನೀರಿನ ಬಳಕೆಗೆ 0.9885 (0.676+0.0125+0.30) ಟಿಎಂಸಿ

24/02/2022

Consumptive ಬಳಕೆ ಪ್ರಮಾಣವು ಇರುತ್ತದೆ. Consumptive ಬಳಕೆಗಳ ಪ್ರಮಾಣವನ್ನು ಕೃಷ್ಣಾ ನ್ಯಾಯಾಧೀಕರಣ ತೀರ್ಪಿನನ್ವಯ ಪರಿಗಣಿಸಲಾಗಿದೆ. ಹೀಗಾಗಿ, ಸದರಿ ಯೋಜನೆಗೆ 0.9885 ಟಿ.ಎಂ.ಸಿ ಹೆಚ್ಚುವರಿ ನೀರಿನ ಹಂಚಿಕೆಯನ್ನು ಮಾಡಬೇಕಾಗಿರುತ್ತದೆ.

4) ಕೃಷ್ಣಾ ನ್ಯಾಯಾಧೀಕರಣ (ಬಚಾವತ್) ತೀರ್ಪಿನಿಂದ ಕರ್ನಾಟಕಕ್ಕೆ 734 ಟಿಎಂಸಿ ಮತ್ತು ಗೋದಾವರಿ ನ್ಯಾಯಾಧೀಕರಣ ತೀರ್ಪಿನಡಿ, ಆಂಧ್ರ ಪ್ರದೇಶವು ಗೋದಾವರಿ ಕಣಿವೆಯಿಂದ ಕೃಷ್ಣಾ ಕಣಿವೆಗೆ 80 ಟಿಎಂಸಿ ನೀರನ್ನು ಪೋಲ್ಲಾವರಂ ಯೋಜನೆಯಲ್ಲಿ ತಿರುಗಿಸುತ್ತಿರುವುದರಿಂದ, ರಾಜ್ಯಕ್ಕೆ ಕೃಷ್ಣಾ ಕಣಿವೆಯಲ್ಲಿ ಹೆಚ್ಚುವರಿಯಾಗಿ 21 ಟಿಎಂಸಿ ನೀರು ಲಭ್ಯವಾಗಿದೆ. ಬಚಾವತ್ ಹಾಗೂ ಗೋದಾವರಿ ನ್ಯಾಯಾಧೀಕರಣಗಳ ತೀರ್ಪುಗಳಿಂದ ರಾಜ್ಯಕ್ಕೆ ಒಟ್ಟಾರೆ 755 ಟಿಎಂಸಿ ನೀರು ಕೃಷ್ಣಾ ಕಣಿವೆಯಲ್ಲಿ ಹಂಚಿಕೆಯಾಗಿರುತ್ತದೆ.

5) ಸದರಿ ಹಂಚಿಕೆಯಡಿ ಕುಡಿಯುವ ಹಾಗೂ ಗೃಹ ಉಪಯೋಗಿ ಉದ್ದೇಶಗಳಿಗಾಗಿ 3.25 ಟಿಎಂಸಿ (1.50 +1.75) ಮತ್ತು ಕೈಗಾರಿಕಾ ಉದ್ದೇಶಕ್ಕಾಗಿ 2.25 ಟಿಎಂಸಿ (0.50 +1.75) ನೀರಿನ ಅವಕಾಶವನ್ನು ಕಲ್ಪಿಸಿದೆ.

6) ಮೇಲೆ ಓದಲಾದ (2) ರ ಪತ್ರದಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ ನಿಯಮಿತ ಇವರು ಘಟ್ಟಿ ಬಸವಣ್ಣಾ ಕುಡಿಯುವ ನೀರಿನ ಯೋಜನೆಗೆ ಅವಶ್ಯವಿರುವ ನೀರಿನ ಹಂಚಿಕೆಯನ್ನು ಮಾಡುವ ಬಗ್ಗೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

7) ಮೇಲೆ ಓದಲಾದ (3) ರ ಪತ್ರದಲ್ಲಿ ಮುಖ್ಯ ಇಂಜಿನಿಯರ್, ಅಂತರ ರಾಜ್ಯ ಜಲ ವಿವಾದ ಇವರು, ಸದರಿ ಯೋಜನೆಗೆ ನೀರಿನ ಹಂಚಿಕೆ ಮಾಡುವ ಬಗ್ಗೆ ಪ್ರಧಾನ ಇಂಜಿನಿಯರ್, ಜಲ ಸಂಪನ್ಮೂಲ ಸಂಸ್ಥೆ ಇವರು ಸರ್ಕಾರಕ್ಕೆ ಬರೆದಿರುವ ದಿ:17.04.2021 ರ ಪತ್ರವನ್ನು ಸಲ್ಲಿಸಿರುತ್ತಾರೆ. ಘಟ್ಟಿ ಬಸವಣ್ಣಾ ಕುಡಿಯುವ ನೀರಿನ ಯೋಜನೆಯಾಗಿದ್ದು, ರಾಜ್ಯ ಹಾಗೂ ರಾಷ್ಟ್ರ ಜಲ ನೀತಿಗಳಲ್ಲಿ ಕುಡಿಯುವ ನೀರಿಗೆ ಮೊದಲ ಆದ್ಯತೆ ಇರುವುದರಿಂದ ರಾಜ್ಯಕ್ಕೆ ಕೃಷ್ಣಾ ನ್ಯಾಯಾಧೀಕರಣದಿಂದ (ಬಚಾವತ್) ಹಂಚಿಕೆಯಾಗಿರುವ 734 ಟಿಎಂಸಿ ಯಲ್ಲಿ ಸದರಿ ಯೋಜನೆಗೆ ನೀರು ಕಲ್ಪಿಸಲು ಅವಕಾಶವಿರುವುದಾಗಿ ಮುಖ್ಯ ಇಂಜಿನಿಯರ್, ಅಂತರ ರಾಜ್ಯ ಜಲ ವಿವಾದ ಇವರು ತಿಳಿಸಿರುವ ಅಭಿಪ್ರಾಯಕ್ಕೆ ಪ್ರಧಾನ ಇಂಜಿನಿಯರ್ ಅವರು ಸಹಮತ ತಿಳಿಸಿ ಸರ್ಕಾರಕ್ಕೆ ವರದಿ ಸಲ್ಲಿಸಿರುತ್ತಾರೆ.

8) ಘಟ್ಟಿ ಬಸವಣ್ಣಾ ಕುಡಿಯುವ ನೀರಿನ ಯೋಜನೆಗೆ ಅಗತ್ಯವಿರುವ 0.9885 ಟಿಎಂಸಿ (consumptive use) ಪ್ರಮಾಣವನ್ನು ಕೃಷ್ಣಾ ನ್ಯಾಯಾಧೀಕರಣ (ಬಚಾವತ್) ಹಾಗೂ ಗೋದಾವರಿ ನ್ಯಾಯಾಧೀಕರಣಗಳ ತೀರ್ಪುಗಳಿಂದ ರಾಜ್ಯಕ್ಕೆ ಹಂಚಿಕೆಯಾಗಿರುವ ಒಟ್ಟಾರೆ

24/02/2022

755 ಟಿಎಂಸಿ ಪ್ರಮಾಣದಲ್ಲಿ ಅವಕಾಶ/ಹಂಚಿಕೆ ಮಾಡುವ ವಿಷಯವನ್ನು ಪರಿಶೀಲಿಸಲಾಗಿದೆ.

ಅದರಂತೆ ಕೆಳಕಂಡ ಆದೇಶವನ್ನು ಹೊರಡಿಸಲಾಗಿದೆ.

**ಸರ್ಕಾರದ ಆದೇಶ ಸಂಖ್ಯೆ: ಜಸಂಇ 6 ವಿಬ್ಯಾಮ 2020, ದಿನಾಂಕ: 24.02.2022.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, ಕೃಷ್ಣಾ ನ್ಯಾಯಾಧೀಕರಣ (ಬಚಾವತ್) ಹಾಗೂ ಗೋದಾವರಿ ನ್ಯಾಯಾಧೀಕರಣಗಳ ತೀರ್ಪುಗಳಿಂದ ರಾಜ್ಯಕ್ಕೆ ಹಂಚಿಕೆಯಾಗಿರುವ ಒಟ್ಟಾರೆ 755 ಟಿಎಂಸಿ (ಬಚಾವತ್ -734 ಟಿಎಂಸಿ, ಗೋದಾವರಿ ನ್ಯಾಯಾಧೀಕರಣ-21 ಟಿಎಂಸಿ) ನೀರಿನ ಪ್ರಮಾಣದಲ್ಲಿ, ಬೆಳಗಾವಿ ಜಿಲ್ಲೆಯ ಗೋಕಾಕ್ ತಾಲ್ಲೂಕಿನ ಘಟ್ಟಿ ಬಸವಣ್ಣಾ ಕುಡಿಯುವ ನೀರು ಸರಬರಾಜು ಯೋಜನೆಗೆ 4.78 ಟಿ.ಎಂ.ಸಿ. ನೀರನ್ನು ಬಳಸಿಕೊಳ್ಳಲು ಅನುವಾಗುವಂತೆ 0.9885 ಟಿಎಂಸಿ (Consumptive use) ನೀರಿನ ಹಂಚಿಕೆಯನ್ನು ಮಾಡಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

24/02/2022

(ವೀರೇಂದ್ರ.ಕೆ)
ಸರ್ಕಾರದ ಅಧೀನ ಕಾರ್ಯದರ್ಶಿ (ತಾಂತ್ರಿಕ-4)
ಜಲ ಸಂಪನ್ಮೂಲ ಇಲಾಖೆ.

**ಇವರಿಗೆ:**

ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ಸರ್ಕಾರಿ ಮುದ್ರಣಾಲಯ, ಮೈಸೂರು ರಸ್ತೆ, ಬೆಂಗಳೂರು ಇವರಿಗೆ ಮುಂದಿನ ವಿಶೇಷ ರಾಜ್ಯ ಪತ್ರದಲ್ಲಿ ಪ್ರಕಟಗೊಳಿಸುವಂತೆ ಹಾಗೂ ಪ್ರಕಟಿಸಿದ 100 ಪ್ರತಿಗಳನ್ನು ಇಲಾಖೆಗೆ ಕಳುಹಿಸಿಕೊಡುವಂತೆ ಕೋರಲಾಗಿದೆ.

**ಪ್ರತಿಯನ್ನು:**

1) ಮಹಾಲೇಖಪಾಲರು (ಎ & ಇ ) ಕರ್ನಾಟಕ, ಬೆಂಗಳೂರು.
2) ಮಾನ್ಯ ಮುಖ್ಯಮಂತ್ರಿಯವರ ಆಪ್ತ ಕಾರ್ಯದರ್ಶಿಯವರು, ವಿಧಾನಸೌಧ, ಬೆಂಗಳೂರು.
3) ಮಾನ್ಯ ಜಲ ಸಂಪನ್ಮೂಲ ಸಚಿವರ ಆಪ್ತ ಕಾರ್ಯದರ್ಶಿಯವರು, ವಿಧಾನಸೌಧ, ಬೆಂಗಳೂರು.

4) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
5) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
6) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
7) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಯವರು, ಜಲ ಸಂಪನ್ಮೂಲ ಇಲಾಖೆ, ವಿಕಾಸಸೌಧ, ಬೆಂಗಳೂರು.
8) ಸರ್ಕಾರದ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಯವರು, ಜಲ ಸಂಪನ್ಮೂಲ ಇಲಾಖೆ, ವಿಕಾಸಸೌಧ, ಬೆಂಗಳೂರು.
9) ಸರ್ಕಾರದ ಹೆಚ್ಚುವರಿ ಕಾರ್ಯದರ್ಶಿಯವರ ಆಪ್ತ ಸಹಾಯಕರು, ಜಲ ಸಂಪನ್ಮೂಲ ಇಲಾಖೆ, ವಿಕಾಸಸೌಧ, ಬೆಂಗಳೂರು.
10) ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಬೆಂಗಳೂರು.
11) ಮುಖ್ಯ ಇಂಜಿನಿಯರ್, ಕರ್ನಾಟಕ ನೀರಾವರಿ ನಿಗಮ ನಿಯಮಿತ ನೀರಾವರಿ (ಉತ್ತರ) ಬೆಳಗಾವಿ.
12) ಪ್ರಧಾನ ಇಂಜಿನಿಯರ್, ಜಲಸಂಪನ್ಮೂಲ ಅಭಿವೃದ್ಧಿ ಸಂಸ್ಥೆ, ಬೆಂಗಳೂರು,
13) ಮುಖ್ಯ ಇಂಜಿನಿಯರ್, ಅಂತರ ರಾಜ್ಯ ಜಲ ವಿವಾದ,ಜಲಸಂಪನ್ಮೂಲ ಅಭಿವೃದ್ಧಿ ಸಂಸ್ಥೆ, ಬೆಂಗಳೂರು,
14) ತಾಂತ್ರಿಕ ಸಹಾಯಕರು, ಜಲಸಂನ್ಮೂಲ ಇಲಾಖೆ, ವಿಕಾಸ ಸೌಧ, ಬೆಂಗಳೂರು.
15) ಶಾಖಾ ರಕ್ಷಾ ಕಡತ/ ಹೆಚ್ಚಿನ ಪ್ರತಿ.

24/02/2022

******